# ಹರಿದಾಸ ಸಾಹಿತ್ಯದ ಪ್ರವರ್ತಕರಾದ ಶ್ರೀಪಾದರಾಜರು

ಎಸ್. ಎಸ್. ರಮೇಶ್

ಕರ್ನಾಟಕದಲ್ಲಿ ಭಕ್ತಿಪರಂಪರೆಯ ಅಮೃತಫಲವಾಗಿ ಮೂಡಿಬಂದುದೇ ಹರಿದಾಸ ಕೀರ್ತನ ಸಾಹಿತ್ಯ. ಇದರ ಪ್ರವರ್ತಕರೆಂದೇ ಖ್ಯಾತರಾದ ಶ್ರೀಪಾದರಾಜರು ಬಹಳ ದೊಡ್ಡ ಸಂತರೂ, ವಿದ್ವಾಂಸರೂ ತತ್ತ್ವಜ್ಞರೂ ಆಗಿದ್ದರು. ಅವರ ಜೀವನ, ಕೃತಿಗಳನ್ನು ಕುರಿತ ಪರಿಚಯಾತ್ಮಕ ವಿವರಣೆ ಇಲ್ಲಿದೆ. ಲೇಖಕರು ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಯತಿವರ್ಯರೊಬ್ಬರು ಸಂಸ್ಥಾನ ದೇವರ ಮೂರ್ತಿಗಳ ಪೂಜೆ ಮಾಡುತ್ತಿದ್ದಾರೆ. ಬೆರಳೆಣಿಕೆಯ ಪಂಡಿತರು ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದಾರೆ. ನೂರಾರು ಭಕ್ತರು ಮೌನವಾಗಿ ಪೂಜಾಕಾರ್ಯಕ್ರಮವನ್ನು ನೋಡುತ್ತಿದ್ದಾರೆ. ಆ ಯತಿವರ್ಯರಿಗೆ ಒಂದು ಆಲೋಚನೆ ಬಂದಿತು. ಸಾಮಾನ್ಯರು ತಮ್ಮ ಮಾತೃಭಾಷೆಯಲ್ಲಿ ಭಗವಂತನ ನಾಮಸ್ಮರಣೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಅವರು ಸಂಕಲ್ಪ ಮಾಡಿದರು.

ಭಗವಂತ ಮತ್ತು ಭಕ್ತರ ನಡುವೆ ಪರಿಚಿತವಾದ ಭಾಷೆಯಲ್ಲಿ ಭಾವ ಸಂಬಂಧ ಏರ್ಪಡಿಸಲು ಮುಂದಾದ ಯತಿವರ್ಯರೇ ಶ್ರೀಪಾದರಾಜರು.

ಶ್ರೀ ಸ್ವರ್ಣವರ್ಣತೀರ್ಥರು ಶ್ರೀಪಾದರಾಜರಿಗೆ ಸಂನ್ಯಾಸ ದೀಕ್ಷೆಯಿತ್ತ ಯತಿಗಳು. ಶ್ರೀಪಾದರಾಜರು ಗುರುಗಳೊಂದಿಗೆ ತಮಿಳುನಾಡಿನ ಶ್ರೀರಂಗದಲ್ಲಿ ಕೆಲಕಾಲ ನೆಲೆಸಿದ್ದರು. ಅಲ್ಲಿನ ಆಳ್ವಾರರು ತಮ್ಮ ಮಾತೃಭಾಷೆ ತಮಿಳಿನಲ್ಲಿ ಹರಿಭಕ್ತಿಪ್ರಸಾರ ಮಾಡಿರುವುದನ್ನು ಗಮನಿಸಿದ್ದರು.

ಶ್ರೀರಂಗ ಕ್ಷೇತ್ರದ ಶ್ರೀರಂಗನಾಥಸ್ವಾಮಿಯ ಮೇಲೆ ಶ್ರೀಪಾದರಾಜರಿಗೆ ವಿಶೇಷವಾದ ಭಕ್ತಿ. ಅವರ ಈ ಕೀರ್ತನೆಯ ಕೆಲ ಸಾಲುಗಳನ್ನು ನೋಡಿ:

**ಕಂಗಳಿವ್ಯಾತಕೋ ಕಾವೇರಿ ರಂಗನ ನೋಡದ ।**
**ಜಗಂಗಳೊಳಗೆ ಮಂಗಳ ಮೂರುತಿ**
**ರಂಗನ ಶ್ರೀಪಾದಂಗಳ ನೋಡದ ॥**
**ಎಂದಿಗಾದರೊಮ್ಮೆ ಜನರು**
**ಬಂದು ಭೂಮಿಯಲ್ಲಿ ನಿಂದು**
**ಚಂದ್ರಪುಷ್ಕರಿಣಿ ಸ್ನಾನವ ಮಾಡಿ ಆ-**
**ನಂದದಿಂದಲಿ ರಂಗನ ನೋಡದ**
**ಕಂಗಳಿವ್ಯಾತಕೋ.....**



ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಗಳಿಗೆ ಅನನ್ಯವಾದ ಕೊಡುಗೆಯನ್ನು ನೀಡಿದವರು ಕನ್ನಡ ನಾಡಿನ ಹರಿದಾಸರು. ಶ್ರೀಮಂತವಾದ ಹರಿದಾಸ ಪರಂಪರೆಯ ಆದ್ಯ ಪ್ರವರ್ತಕರು ಮುಳುಬಾಗಿಲಿನ ಶ್ರೀಪಾದರಾಜರು. 'ಹರಿಯೇ ಸರ್ವೋತ್ತಮ, ಸರ್ವ ವೇದಗಳಿಂದಲೂ ಶ್ರೀಹರಿಯೇ ಪ್ರತಿಪಾದ್ಯನು' ಎಂದು ದೃಢವಾಗಿ ಪ್ರತಿಪಾದಿಸಿದ ಶ್ರೀಮಧ್ವಾಚಾರ್ಯರು, '**ಅಮಲಾ ಭಕ್ತಿಶ್ಚ ತತ್ಸಾಧನಂ**' (ಪರಿಶುದ್ಧವಾದ ಭಕ್ತಿಯೇ ಮುಕ್ತಿಗೆ ಉತ್ತಮ ಸಾಧನ) ಎಂದು ಸಾರಿದರು.

ಪೂರ್ಣಪ್ರಜ್ಞರೆಂದು ಖ್ಯಾತರಾಗಿದ್ದ ಶ್ರೀ ಮಧ್ವಾಚಾರ್ಯರು, ಸುಮಾರು ನಲ್ವತ್ತು ಕೃತಿಗಳನ್ನು ಭಾರತೀಯ ಆಧ್ಯಾತ್ಮಿಕ ಪರಂಪರೆಗೆ ನೀಡಿದವರು. ಕನ್ನಡನಾಡಿನ ಹರಿದಾಸರು, ಆಚಾರ್ಯ ಮಧ್ವರು ಪ್ರತಿಪಾದಿಸಿದ, ದ್ವೈತ ಸಿದ್ಧಾಂತವನ್ನು ಜನರಾಡುವ ಭಾಷೆಯಲ್ಲಿ ಸಂಗೀತ ಮಾಧ್ಯಮದ ಮೂಲಕ ಸೊಗಸಾಗಿ ಪ್ರಚಾರ ಮಾಡಿದರು.

ಶ್ರೀಪಾದರಾಜರು (ಕ್ರಿ.ಶ. ೧೪೦೪-೧೫೦೨) ಶ್ರೀ ಮಧ್ವಾಚಾರ್ಯರ ನೇರ ಶಿಷ್ಯರಾಗಿದ್ದ ಶ್ರೀ ಪದ್ಮನಾಭತೀರ್ಥರ ಪೀಳಿಗೆಯಲ್ಲಿ ಎಂಟನೆಯ ಮಠಾಧಿಪತಿಗಳಾದರು.

ಹರಿದಾಸ ಪರಂಪರೆಯ ಆದ್ಯಪ್ರವರ್ತಕರಾದ ಶ್ರೀಪಾದರಾಜರು ಸುಳಾದಿ, ಉಗಾಭೋಗ, ದಂಡಕ, ವೃತ್ತನಾಮ, ಕೀರ್ತನೆ - ಹೀಗೆ ಎಲ್ಲಾ ಪ್ರಕಾರಗಳಲ್ಲಿ ಕೃತಿರಚನೆ ಮಾಡುವ ಮೂಲಕ ದಾಸ ಸಾಹಿತ್ಯ ಪರಂಪರೆಗೆ ಸುಭದ್ರವಾದ ಬುನಾದಿಯನ್ನು ನಿರ್ಮಿಸಿದರು.

**ಭೂಷಣಕೆ ಭೂಷಣ ಇದು ಭೂಷಣ**
**ಶೇಷಗಿರಿವಾಸ ಶ್ರೀವರ ವೆಂಕಟೇಶ ॥ ಪ ॥**
**ನಾಲಿಗೆಗೆ ಭೂಷಣ ನಾರಾಯಣ ನಾಮ**
**ಕಾಲಿಗೆ ಭೂಷಣ ಹರಿಯಾತ್ರೆಯು**
**ಆಲಯಕೆ ಭೂಷಣ ತುಲಸಿ ವೃಂದಾವನ ವಿ-**
**ಶಾಲ ಕರ್ಣಕ್ಕೆ ಭೂಷಣ ವಿಷ್ಣುಕಥೆಯು ॥**

ಮಾನವ ಜನ್ಮದ ಸಾರ್ಥಕತೆ ಇರುವುದು ಸಂಪೂರ್ಣವಾಗಿ ಶ್ರೀಹರಿಗೆ ಸಮರ್ಪಿಸಿಕೊಳ್ಳುವುದರಿಂದ ಎಂದು ಶ್ರೀಪಾದರಾಜರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀಪಾದರಾಜರು ಹರಿದಾಸ ಸಾಹಿತ್ಯ ಪರಂಪರೆಗೆ, ಭದ್ರವಾದ ಬುನಾದಿಯನ್ನು ನಿರ್ಮಿಸಿದ್ದರ ಜೊತೆಗೆ, ರಾಜಗುರುಗಳಾಗಿದ್ದ ಶ್ರೀವ್ಯಾಸರಾಯರಿಗೆ, ಹನ್ನೆರಡು ವರ್ಷಗಳ ದೀರ್ಘಕಾಲ ಬೋಧಿಸಿದ ಆದರ್ಶ ಗುರುಗಳಾಗಿದ್ದವರು. ಹರಿದಾಸ ಸಾಹಿತ್ಯದ ಅಶ್ವಿನೀ ದೇವತೆಗಳೆಂದು ಖ್ಯಾತರಾಗಿರುವ, ಶ್ರೀ ಪುರಂದರದಾಸರು ಮತ್ತು ಶ್ರೀಕನಕದಾಸರಿಗೆ ವಿದ್ಯಾಗುರುಗಳಾಗಿದ್ದವರು ಪೂಜ್ಯ ಶ್ರೀವ್ಯಾಸರಾಯರು.

ಒಂದು ವಿಶಿಷ್ಟ ಸಾಹಿತ್ಯ ಪರಂಪರೆಯನ್ನು ಪ್ರಾರಂಭಿಸಿದ ಶ್ರೀಪಾದರಾಜರು, ಆರಂಭದಲ್ಲಿಯೇ ಉತ್ಕೃಷ್ಟವಾದ ಕೃತಿಗಳನ್ನು ರಚನೆ ಮಾಡಿದ್ದು ದೊಡ್ಡ ಸಾಧನೆಯೇ ಸರಿ.

**ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ**
**ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ**
**ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ**
**ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ**
**ಇನಿತು ಸಂತೋಷ ಅವರವರಿಗಾಗಲಿ ನಿನ್ನ**
**ನೆನೆವೋ ಸಂತೋಷ ಎನಗಾಗಲಿ ನಮ್ಮ ರಂಗವಿಠಲ ॥**

ಸುಮಾರು ಆರು ಶತಮಾನಗಳ ಹಿಂದೆ ರಚಿತವಾದ ಈ ರಚನೆಯು ಭಾಷಾಪ್ರಯೋಗ ನೋಡಿದರೆ ಶ್ರೀಪಾದರಾಜರ ಹಿರಿಮೆ ತಿಳಿಯುತ್ತದೆ.

'ಕಾಡಬೆಳದಿಂಗಳು ಈ ಸಂಸಾರ' ಎನ್ನುವ ಶ್ರೀಪಾದರಾಜರ ಕೀರ್ತನೆಯಲ್ಲಿ ವ್ಯಕ್ತವಾಗಿರುವ ಚಿಂತನೆ, ಪ್ರಸ್ತುತ ಸಮಾಜಕ್ಕೆ ಎಷ್ಟು ಚೆನ್ನಾಗಿ ಅನ್ವಯವಾಗುತ್ತದೆ ನೋಡಿ:

**ಉಂಟಾದ ಕಾಲಕ್ಕೆ ನೆಂಟರು ಇಷ್ಟರು**
**ಬಂಟರಾಗಿ ಮನೆಯ ಬಾಗಿಲ ಕಾಯ್ವರು**
**ಉಂಟಾದತನ ತಪ್ಪಿ ಬಡತನ ಬಂದರೆ**
**ಒಂಟೆಯಂತೆ ಗೋಣ ಮೇಲೆತ್ತುವರು ॥**

ಗಹನವಾದ ತತ್ತ್ವಗಳನ್ನು ಸೊಗಸಾದ ಕನ್ನಡದಲ್ಲಿ ನಿರೂಪಿಸಿದ, ಹಾಗೂ ಸಂಗೀತ ಮಾಧ್ಯಮದ ಮೂಲಕ ಸಹಸ್ರಾರು ರಚನೆಗಳನ್ನು ಜನತೆಗೆ ನೀಡಿರುವ ಹರಿದಾಸರು ನಿಜವಾದ ಅರ್ಥದಲ್ಲಿ ಸಾಧಕರು.

ಸಂಸ್ಕೃತ ಭಾಷೆಯಲ್ಲಿ ಆಳವಾದ ಪಾಂಡಿತ್ಯವಿದ್ದ ಶ್ರೀಪಾದರಾಜರು ತಮ್ಮ ಅರ್ಥಪೂರ್ಣವಾದ ಕನ್ನಡ ಕೃತಿಗಳ ರಚನೆಯಿಂದ ಸಹೃದಯರ ಮನದಲ್ಲಿ ಸ್ಥಿರವಾಗಿ ಉಳಿದಿದ್ದಾರೆ.

ಶ್ರೀಪಾದರಾಜರ ಸುದೀರ್ಘವಾದ ರಚನೆ 'ಶ್ರೀಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕಂ'. ಐದುನೂರ ನಲುವತ್ತಾರು ಸಾಲುಗಳಿರುವ ಈ ಕಾವ್ಯ ಶ್ರೀ ವಿಷ್ಣುವಿನ ನರಸಿಂಹ ಅವತಾರದ ಮಹಿಮೆ ಸಾರುವ ಬೃಹತ್ ರಚನೆ.

ಹರಿದಾಸ ಪರಂಪರೆಯ ತಾತ್ವಿಕ ನೆಲೆಗಟ್ಟಿಗೆ ಕಾರಣಕರ್ತರಾದ ಶ್ರೀ ಮಧ್ವಾಚಾರ್ಯರ ಜೀವನ-ಸಿದ್ಧಾಂತ ಒಳಗೊಂಡ ಅನನ್ಯವಾದ ಕಾವ್ಯವನ್ನು 'ಮಧ್ವನಾಮ' ಹೆಸರಲ್ಲಿ ರಚಿಸಿದವರು ಶ್ರೀಪಾದರಾಜರು.

ತೊಂಬತ್ತೆಂಟು ವರ್ಷಗಳ ಸಾರ್ಥಕ ಜೀವನ ನಡೆಸಿದ ಶ್ರೀಪಾದರಾಜರು ಮುಳಬಾಗಿಲು ಮಠದ ಪೀಠಾಧಿಪತಿಗಳಾಗಿ ಜ್ಞಾನ ಪ್ರಸಾರವನ್ನು ಒಂದು ವ್ರತದಂತೆ ನಡೆಸಿದವರು.

ಭಾರತೀಯ ಸಾಂಸ್ಕೃತಿಕ ಪರಂಪರೆಗೆ ಮೌಲ್ಯಯುತವಾದ ಕೊಡುಗೆಯನ್ನು ನೀಡಿದ್ದ ಶ್ರೀಪಾದರಾಜರ ಸಾಹಿತ್ಯರಾಶಿಯ ಸಂಶೋಧನೆ ಮತ್ತು ಅಧ್ಯಯನವನ್ನು ವಿಭಿನ್ನ ನೆಲೆಗಳಲ್ಲಿ ಹಾಗೂ ವಿಸ್ತಾರವಾದ ರೀತಿಯಲ್ಲಿ ಇನ್ನಷ್ಟು ನಡೆಸಬೇಕಾದ ಅಗತ್ಯವಿದೆ. *